ಅಜ್ಜಿ: ಸ್ಕೂಲ್‌ಗೆ ಹೋಗಲ್ವೇನೇ ಪಿಂಕಿ?
ಪಿಂಕಿ: ಹೋಗಲ್ಲ
ಅಜ್ಜಿ: ಯಾಕೇ?
ಪಿಂಕಿ: ಆ ಟೀಚರ್ ದಡ್ಡ ಇದ್ದಾರೆ, ಎಲ್ಲದಕ್ಕೂ ನನ್ನೇ ಪ್ರಶ್ನೆ ಕೇಳ್ತಾರೆ.

***


ಮೇಡಂ: ಯಾಕೆ ಕ್ಲಾಸ್‌ಗೆ ತಡವಾಗಿ ಬಂದೆ?
ಬಂಟಿ: ಒಬ್ಬ ಅಜ್ಜಿಯನ್ನು ರಸ್ತೆ ದಾಟಿಸಿ ಬಂದೆ. ಒಳ್ಳೆಯ ಕೆಲಸ ಮಾಡಬೇಕು ಅಂತ ನೀವೇ ಹೇಳಿದ್ರಿ ಅಲ್ವ?
ಮೇಡಂ: ಭೇಷ್!, ಆದ್ರೂ ಇಷ್ಟು ಹೊತ್ತು ಯಾಕೆ?
ಬಂಟಿ: ಆ ಅಜ್ಜಿಗೆ ರಸ್ತೆ ದಾಟುವುದಕ್ಕೆ ಇಷ್ಟ ಇರಲಿಲ್ಲ, ಒತ್ತಾಯ ಮಾಡಿ ದಾಟಿಸುವುದರಲ್ಲಿ ಲೇಟಾಯ್ತು ಮೇಡಂ.

***

ಹುಡುಗಿ: ಆಂಟಿ ಸ್ವಲ್ಪ ಶುಂಠಿ ಇದೆಯಾ?
ಆಂಟಿ: ಈ ಟೀ ಪುಡಿ ತೊಗೊ, ಇದರಲ್ಲಿ ಶುಂಠಿ, ಏಲಕ್ಕಿ, ತುಳಸಿ, ಅಶ್ವಗಂಧ ಮುಂತಾದ ಆರೋಗ್ಯಕರ ಅಂಶಗಳನ್ನು ಸೇರಿಸಲಾಗಿದೆ.
ಹುಡುಗಿ: ಆಂಟಿ ಈ ಟೀ ಪೌಡರ್ ನಮ್ಮನೆಯಲ್ಲೂ ಇದೆ. ಶುಠಿ ಬೇಕಾಗಿದ್ದು ಸಾಂಬಾರಿಗೆ ಹಾಕಲು.

***

ಪೇಶೆಂಟ್: ಡಾಕ್ಟ್ರೆ ನನಗೆ ಬಸ್‌ನಲ್ಲಿ ಕುಳಿತ ಕೂಡಲೇ ನಿದ್ದೆ ಬರುತ್ತೆ.
ಡಾಕ್ಟರ್: ಒಳ್ಳೆಯದೆ ಅಲ್ವ?




ಪೇಶೆಂಟ್: ನನ್ನ ಸಮಸ್ಯೆ ಅರ್ಥ ಮಾಡಿಕೊಳ್ಳದೆ ಮಾತನಾಡಬೇಡಿ ಡಾಕ್ಟ್ರೆ! ನಾನೇ ಬಸ್ ಡ್ರೈವರ್.

***

ಪತ್ನಿ: ರೀ ಆ ಕಳ್ಳ ನೋಡ್ರಿ, ನಾನು ಹಬ್ಬಕ್ಕೆ ಅಂತ ಮಾಡಿಟ್ಟಿದ್ದ ಹೊಸ ರುಚಿಯನ್ನು ಹೇಗೆ ಗಬಗಬ ಅಂತ ತಿನ್ನುತ್ತಿದ್ದಾನೆ.
ಪತಿ: ಸರಿ, ಈಗ ನಾನು ಯಾರಿಗೆ ಫೋನ್ ಮಾಡಲಿ ಪೊಲೀಸ್ ಸ್ಟೇಷನ್‌ಗಾ ಅಥವಾ ಆಂಬ್ಯುಲೆನ್ಸ್‌ಗಾ?

***

ಇಬ್ಬರು ಹೆಂಗಸರು ಜೈಲಿನಲ್ಲಿ ಒಂದೇ ಕೋಣೆಯಲ್ಲಿ ಇದ್ದರು.
ಅಂತೂ ಒಂದು ದಿನ ಇಬ್ಬರಿಗೂ ಬಿಡುಗಡೆ ಮಾಡಲಾಯಿತು.
ಸರಿ, ಬರ್ತಿನಿ ಕಣೆ! ಬಾಕಿ ಉಳಿದ ವಿಷಯ ಫೋನ್‌ನಲ್ಲಿ ಮಾತನಾಡೋಣ ಅಂತ ತಮ್ಮ ತಮ್ಮ ಮನೆಯ ದಾರಿ ಹಿಡಿದರು.

***

ಗುಂಡ ಸಮೋಸದ ಒಳಗಿದ್ದ ಬರಿ ಪಲ್ಯ ಮಾತ್ರ ತಿನ್ನುತ್ತಿದ್ದ. ಇದನ್ನು ನೋಡಿದ ಅವನ ಗೆಳೆಯ ಕೇಳಿದ. 'ಯಾಕೆ ಗುಂಡ ಒಳಗಿರುವ ಪಲ್ಯ ಮಾತ್ರ ತಿನ್ನುತ್ತಿದ್ದೀಯ?'
ಅದಕ್ಕೆ ಗುಂಡ ಹೇಳಿದ. 'ನನಗೆ ಹುಷಾರಿಲ್ಲ, ಡಾಕ್ಟರ್ ಹೊರಗಡೆ ಏನು ತಿನ್ನಬೇಡ ಎಂದಿದ್ದಾರೆ ಅದಕ್ಕೆ' ಎಂದ.

***

ಮನೆಯಾಕೆ: ನೀನು ಮದುವೆ ಆಗ್ತಾ ಇದ್ದಿಯ, ಇನ್ನೆಲ್ಲಿ ನಮ್ಮ ಮನೆಯ ಕೆಲಸಕ್ಕೆ ಬರ್ತೀಯಾ?
ಕೆಲಸದಾಕೆ: ಖಂಡಿತವಾಗಿಯೂ ಬರ್ತೀನಿ ಅಮ್ಮಾವ್ರೆ, ನಾನು ಮದುವೆ ಆಗ್ತಾ ಇರೋದು ನಿಮ್ಮ ಮಗನನ್ನೆ.

***

ಕಲ್ಲೇಶಿ: ನಿನ್ನೆ ಹೋಟೆಲ್‌ನಲ್ಲಿ ಇಡ್ಲಿ ತಿನ್ನೋಕ್ಕೆ ಹೋಗಿದ್ದೆ ಆದ್ರೆ ಲಾಸ್ಟಿಗೆ ಒಂದು ಇಡ್ಲಿ ಹೆಚ್ಚಾಗಿಬಿಡ್ತು.
ಮಲ್ಲೇಶಿ: ಮತ್ತ ಆ ಇಡ್ಲಿ ಹಂಗ ಬಿಟ್ಟು ಬಂದ್ಯಾ?
ಕಲ್ಲೇಶಿ: ಇಲ್ಲ ಲೇ ಅದ್ರ ಫೋಟೊ ತೆಗೆದು ಓಎಲ್‌ಎಕ್ಸ್‌ನಾಗ ಹಾಕಿದೆ. ಆಗಿಂದಾಗ ಬಾಜು ಟೇಬಲ್‌ನವನು ಅರ್ಧ ರೇಟಿಗೆ ತಗೊಂಡ.

ಸಂಗ್ರಹ: ಶರದ ಕುಲಕರ್ಣಿ, ಬೀದರ್




ಕಳ್ಳ: ನಾವು ಬೆಂಗಳೂರಿನಲ್ಲಿದ್ದಾಗ ಯಾವ ಹೋಟೆಲ್ಲಿನಲ್ಲಿ ತಿಂಡಿ ತಿಂದೆವು?
ಇನ್ನೊಬ್ಬ ಕಳ್ಳ: ಸ್ವಲ್ಪ ತಡೆ, ಪ್ಲೇಟ್ ಮೇಲಿನ ಹೆಸರು ನೋಡಿ ಹೇಳುತ್ತೇನೆ.

***

ಸ್ವಾಮಿ: ವಿಸ್ಕಿಯನ್ನು ನಿನ್ನ ವೈರಿಯೆಂದು ತಿಳಿದುಕೋ.
ಭಕ್ತ: ಆದರೆ ಸ್ವಾಮೀಜಿ, ನಿನ್ನೆ ನೀವು ಪ್ರವಚನದಲ್ಲಿ 'ನಿನ್ನ ವೈರಿಯನ್ನು ಪ್ರೀತಿಸು' ಎಂದು ಹೇಳಿದಿರಲ್ಲ?
ಸ್ವಾಮಿ: ಹೇಳಿದ್ದೇನೆ, ಆದರೆ ವೈರಿಯನ್ನು ಕುಡಿಯಲೆಂದು ಹೇಳಿಲ್ಲವಲ್ಲ!

***

ಹೆಣ್ಣುಮಗಳು: ನನ್ನ ಯಜಮಾನರಿಗೆ ಮಾನಸಿಕ ರೋಗವಾಗಿದೆ ಡಾಕ್ಟರೆ, ಕೆಲವು ಸಲ ಅವರೊಂದಿಗೆ ತಾಸುಗಟ್ಟಲೆ ಮಾತಾಡುತ್ತೇನೆ, ಅವರು ಒಂದೂ ಶಬ್ದವನ್ನು ಕಿವಿಗೆ ಹಾಕಿಕೊಳ್ಳುವುದಿಲ್ಲ!.
ಡಾಕ್ಟರ್: ಅದು ರೋಗವಲ್ಲಮ್ಮ, ದೇವರು ಕೊಟ್ಟ ವರ!

***

ಆತ: ಒಂದು ಹೊಸ ಯಂತ್ರವಿದೆಯಂತೆ, ನಾವು ಸುಳ್ಳು ಹೇಳುವುದನ್ನು ತಕ್ಷಣ ಕಂಡುಹಿಡಿಯುವುದಂತೆ! ಪೇಪರಿನಲ್ಲಿ ಬಂದಿದೆ, ಓದಿದೆಯಾ?
ಈತ: ಓದುವುದೇನು ಬಂತು? ಅಂಥ ಯಂತ್ರವನ್ನು ನಾನು ಮದುವೆಯಾಗಿದ್ದೇನೆ!

***

ಗಂಡ: ನೋಡೇ, ನನ್ನನ್ನು ಮರೆಗುಳಿಯೆಂದು ಛೇಡಿಸುತ್ತಿದ್ದಿ, ಕೊಡೆಯನ್ನು ಮರೆಯದೆ ತಂದಿದ್ದೇನೆ, ನೋಡು!
ಹೆಂಡತಿ: ಅಯ್ಯೋ, ನೀವು ಹೊರಗೆ ಹೋಗುವಾಗ ಕೊಡೆಯನ್ನೇ ಒಯ್ದಿರಲಿಲ್ಲ!

***

ಕಾರ್ಯಕ್ರಮವೊಂದರಲ್ಲಿ ಮಹಿಳೆಯೊಬ್ಬಳು ಹಾಡುತ್ತಿದ್ದಳು. ತಾಳ್ಮೆಗೆಟ್ಟ ಕೇಳುಗನೊಬ್ಬನು ತನ್ನ ಹತ್ತಿರ ಕುಳಿತವನಿಗೆ ಅಂದ 'ಎಷ್ಟು ಕೆಟ್ಟದಾಗಿ ಹಾಡುತ್ತಿದ್ದಾಳಲ್ಲ ಎಲ್ಲಿಯವಳೋ ಏನೋ!.'
'ಆಕೆ ನನ್ನ ಹೆಂಡತಿ!'
'ಕ್ಷಮಿಸಿ, ಅವರದೇನು ತಪ್ಪು, ಆ ಹಾಡು ನೋಡಿ ಎಷ್ಟು ಕಳಪೆಯಾಗಿದೆ, ಯಾವನು ಬರೆದದ್ದೋ!
'ನಾನು'...

ಸಂಗ್ರಹ: ಗುರುಲಿಂಗಪ್ಪ ಈ. ಬಿರಾದಾರ, ವಿಜಯಪುರ